7 ಆಸ್ಪತ್ರೆಗಳು ಅವರ ಕ್ಷೇತ್ರದಲ್ಲಿ ಆಗಬೇಕೆಂದು ನಮ್ಮ ಗಮನಕ್ಕೆ ತಂದಿದ್ದಾರೆ. ನಾನು ಹಂತ ಹಂತವಾಗಿ ಆದ್ಯತೆ ಕೊಡುವುದಾಗಿ ಹಾಗೂ ಅವುಗಳನ್ನು ಮೇಲ್ದಜೇಗೇರಿಸುವುದಾಗಿ ತಮ್ಮ ಮುಖಾಂತರ ಭರವಸೆ ಕೊಡುತ್ತೇನೆ.

ಕುಡಿಯುವ ನೀರು ಒದಗಿಸುವುದು

27 (149) ಶ್ರೀ ಜಯಚಂದ್ರ ಟಿ.ಬಿ. (ಸಿರಾ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಮದಲೂರು ಕೆರೆಗೆ ಕುಡಿಯುವ ನೀರು ಹರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದರೆ ಯಾವ ಮೂಲದಿಂದ ಹಾಗೂ ಎಷ್ಟು ಪ್ರಮಾಣದ ನೀರು ಹರಿಸಲು ಉದ್ದೇಶಿಸಲಾಗಿದೆ;

(ಆ) ಯಾವ ಕೆರೆಯಿಂದ ಮದಲೂರು ಕೆರೆಗೆ ನೀರು ಹರಿಸಲಾಗುತ್ತದೆ ಇದಕ್ಕೆ ಸಂಬಂಧಿಸಿದ ಸರ್ವೇ ಕಾರ್ಯ ಆಗಿದೆಯೇ ಅಥವಾ ಮಂಜೂರಾತಿ ದೊರೆತಿದೆಯೇ;

(ಇ) ಮೇಲ್ಕಂಡ ಕ್ರಮ ಸಂಖ್ಯೆ 1 ಮತ್ತು 2ಅನ್ನು ಅನುಸರಿಸಿ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ; ಹಾಗಿದ್ದರೆ ಇದಕ್ಕೆ ಮಂಜೂರಾತಿ ದೊರೆತಿದೆಯೇ;

(ಈ) ಯಾವ ಮೂಲದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

(ಉ) ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ಯಾವುದಾದರೂ ಆದೇಶ ಹೊರಡಿಸಿದೆಯೇ?

ಶ್ರೀಮತಿ ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

(ಆ)(ಆ) ಹೌದು ರೂ.700 ಲಕ್ಷ ಅಂದಾಜಿನ ರೇಖಾ ಅಂದಾಜು ಪ್ರಸ್ತಾಪಿಸಲಾಗಿದೆ. ಕಳ್ಳಂಬೆಳ್ಳಾ ಕೆರೆಯಿಂದ ವಾರ್ಷಿಕ 24.03Mcft ಹೆಚ್ಚುವರಿ ನೀರನ್ನು ಮದಲೂರು ಕೆರೆಗೆ ಫೀಡರ್ ಚಾನಲ್ ನಿರ್ಮಿಸಿ ಮದಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಅಗತ್ಯವಿರುವ ನೀರನ್ನು ಶುದ್ಧೀಕರಿಸಿ ಸರಬರಾಜು ಮಾಡಲು ಉದ್ದೇಶಿಸಿದೆ. ಅನುಮೋದಿತ ತಜ್ಞ ಸಂಸ್ಥೆಗೆ ಸರ್ವೇ ಕಾರ್ಯವಹಿಸಲಾಗಿದೆ.

(ಇ)(ಈ)(ಉ) ವಿವರಣಾತ್ಮಕ ಅಂದಾಜು ಪಟ್ಟಿಯನ್ನು ಸರ್ವೇ ಮತ್ತು ಯೋಜನಾ ವರದಿ ಆಧರಿಸಿ ತಯಾರಿಸಬೇಕಾಗಿದೆ. ಈ ಯೋಜನೆ ಅಂದಾಜು ಪಟ್ಟಿ ಸಿದ್ಧಪಡಿಸಿದ ನಂತರ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಲು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ: ಸನ್ಮಾನ್ಯ ಸಭಾಧ್ಯಕ್ಷರೆ, ಆಂಧ್ರದ ಗಡಿ ಭಾಗದಲ್ಲಿ ಬರತಕ್ಕಂತಹ ಹಳ್ಳಿಗಳಿಗೆ ಕಳ್ಳಂಬೆಳ್ಳ ಕೆರೆ ಮೂಲದಿಂದ ಮದಲೂರು ಕೆರೆಗೆ feeder canal ನಿರ್ಮಿಸಿ, ಮದಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ನೀರನ್ನು ಕೊಡಬೇಕೆಂಬ ಉದ್ದೇಶವಿದೆ ಎನ್ನುವಂತಹ ಮಾತನ್ನು ಹೇಳಿದ್ದೀರಿ, ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಕಳ್ಳಂಬೆಳ್ಳ ಮತ್ತು ಶಿರಾದಿಂದ ಪಟ್ಟಣ ಪ್ರದೇಶಗಳಿಗೆ ನೀರನ್ನು ಕೊಡುತ್ತಿದ್ದೇವೆ ಈಗಾಗಲೇ ಕಳ್ಳಂಬೆಳ್ಳ ಮತ್ತು ಶಿರಾದಲ್ಲಿ ನೀರಿನ ಕೊರತೆಯಿರುವುದರಿಂದ ಹೇಮಾವತಿ ಮೂಲದಿಂದ ನೀರನ್ನು ತಂದು ಇವತ್ತು ಕುಡಿಯುವ ನೀರಿನ ಪೂರೈಕೆ ಮಾಡುತ್ತಿದ್ದೇವೆ. ಹಾಗೆಯೇ ಮದಲೂರು ಕೆರೆಗೆ ನೀರನ್ನು ತೆಗೆದುಕೊಂಡು ಹೋಗಬೇಕಾದಾಗ ಸುತ್ತಮುತ್ತಲಿನ ಗ್ರಾಮವೆಂದರೆ ತಾವು ಹೇಳಿದ ರೀತಿಯಲ್ಲಿ 17 ಊರುಗಳು 17 ಕೆರೆಗಳು ಬರುತ್ತವೆ. ಈ ಯೋಜನೆ ಆಂಧ್ರದ ಗಡಿಭಾಗದಲ್ಲಿ ಬರುವ ದೃಷ್ಟಿಯಿಂದ ಇದನ್ನು ತೆಗೆದುಕೊಳ್ಳಬೇಕಾಗಿರುವ ಅನಿವಾರ್ಯತೆ ಇವತ್ತು ಇದೆ. ಆ ಕಾರಣಕ್ಕೋಸ್ಕರ ತಾವು ಹೇಮಾವತಿಯ ಮೂಲದಿಂದಲೇ ನೀರಿನ ಕೊರತೆ ತುಂಬಬೇಕಾಗುತ್ತದೆ. ಅದಕ್ಕೋಸ್ಕರ ನನ್ನ ನೇರ ಪ್ರಶ್ನೆ ಏನೆಂದರೆ, ತಾವು ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಗ್ರಾಮೀಣಾಭಿವೃದ್ಧಿಯ ಬಗ್ಗೆ ಕಳಕಳಿಯನ್ನು ಕುಡಿಯುವ ನೀರಿಗೆ ಕೊಡಬೇಕು ಹಾಗೂ ಗಡಿ ಪ್ರದೇಶಗಳಲ್ಲಿರುವಂತಹ ಹಳ್ಳಿಗಳಿಗೆ ನೀರನ್ನು ಒದಗಿಸಬೇಕೆಂಬ ಉದ್ದೇಶ ಇಟ್ಟುಕೊಂಡಿರುವುದು ಬಹಳ ಒಳ್ಳೆಯದು. ಅದಕ್ಕೋಸ್ಕರ ತಾವು ನೀರಾವರಿ ಇಲಾಖೆಗೆ ಶಿಫಾರಸ್ಸು ಮಾಡಿ ಹೇಮಾವತಿ ಮೂಲದಿಂದ ನೀರನ್ನು ಒದಗಿಸುವಂತೆ ಶಿಫಾರಸ್ಸು ಮಾಡುವಿರಾ? ಇನ್ನೊಂದು ಮುಖ್ಯವಾದಂತಹ ಪ್ರಶ್ನೆ ಏನೆಂದರೆ, ಈ ರೀತಿಯಾಗಿರತಕ್ಕಂತಹ ನದಿ ಮೂಲದಿಂದ ನೀರನ್ನು ಅನೇಕ ಹಳ್ಳಿಗಳಿಗೆ ಒದಗಿಸುವ ಯೋಜನೆಯನ್ನು ರಾಜ್ಯದ ಉದ್ದಗಲಕ್ಕೂ ಪೂರೈಕೆ ಮಾಡಲು ಅವಕಾಶವಿದೆ. ಇವತ್ತು ಪಟ್ಟಣ ಪ್ರದೇಶಗಳಲ್ಲಿ ನೀರನ್ನು ಕೊಡಬೇಕಾದಾಗ Urban Water and Sewage Board ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆದರೆ ನದಿ ಮೂಲದಿಂದ ಈ ರೀತಿ ವಿಶಿಷ್ಟ ಯೋಜನೆ ಮಾಡಬೇಕಾದಾಗ ಏನಾದರೂ ಗ್ರಾಮೀಣಾಭಿವೃದ್ಧಿಗೆ, ಹಳ್ಳಿಗಳಿಗೆ ಈ ರೀತಿ ನೀರನ್ನು ಕೊಡತಕ್ಕಂತಹ ಒಂದು Authority ಯನ್ನು create ಮಾಡುವಂತಹ ಚಿಂತನೆ ಮಾಡುತ್ತೀರಾ?

ಶ್ರೀಮತಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇವತ್ತು ಶಿರಾ ತಾಲ್ಲೂಕು ಕೂಡ ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದು. ಈ ಭಾಗದಲ್ಲಿ ಮುಖ್ಯವಾಗಿ ತುಮಕೂರು ಜಿಲ್ಲೆ, ಕೋಲಾರ

ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇರುವುದು ಮತ್ತು bore-well ತೋಡಿದ ಸಂದರ್ಭದಲ್ಲಿ Fluoride ನೀರು ಬಂದು ಅಶುದ್ಧವಾದ ನೀರನ್ನು ಪೂರೈಕೆ ಮಾಡುತ್ತಿರುವುದು ತಮ್ಮೆಲ್ಲರ ಗಮನಕ್ಕೆ ಬಂದಿದೆ. ಇವತ್ತು ಶಿರಾ ತಾಲ್ಲೂಕಿನ 111 ಗ್ರಾಮಗಳಿಗೆ ನೀರನ್ನು ಕೊಡಬೇಕೆಂದು ಹಲವಾರು ಬಾರಿ ಯೋಜನೆಗಳನ್ನು ಮಾಡಿದ್ದೇವೆ. ಇವತ್ತು ಮದಲೂರು ಕೆರೆಗೆ ಕಳ್ಳಂಬೆಳ್ಳ ಕೆರೆಯಿಂದ ನೀರನ್ನು ತುಂಬಿಸಬೇಕೆಂಬ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಹೇಗೆ ನೀರನ್ನು ಕೊಡಬಹುದು ಎನ್ನು ಬಗ್ಗೆ ಅಗತ್ಯವಾದ ಮೂಲವನ್ನು ಕಂಡುಹಿಡಿಯುವ ಒಂದು ಸರ್ವೆ ಕಾರ್ಯ ಮಾಡಬೇಕೆನ್ನುವ ವಿಚಾರ ಕೂಡ ಸರ್ಕಾರದ ಮುಂದಿದೆ. ಸರ್ವೆ ಮಾಡುವ ಕಾರ್ಯಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ಸಮಿತಿಯು ಇನ್ನು 2–3 ತಿಂಗಳಲ್ಲಿ ವರದಿ ಕೊಡಬೇಕೆಂದು ಅದೇಶವನ್ನು ಕೊಡಲಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಶಾಸಕರು ಹೇಳಿದಂತೆ ಕಳ್ಳಂಬೆಳ್ಳ ಕೆರೆಗೆ ನೀರನ್ನು ತುಂಬಿಸಬೇಕಾದರೆ ಹೇಮಾವತಿಯಿಂದ ನೀರು ಬರಬೇಕೆನ್ನುವುದರಲ್ಲಿ ಸತ್ಯವಿದೆ. ಏಕೆಂದರೆ, ಬೇರೆ ಯಾವುದೇ ಮೂಲದಿಂದ ನೀರನ್ನು ಕೊಡಲು ಆಗುವುದಿಲ್ಲ. ಆ ಕಾರಣಕ್ಕಾಗಿ ನಾವು ಇವತ್ತು ಜಲ ಸಂಪನ್ಮೂಲ ಇಲಾಖೆಯನ್ನು ಸಂಪರ್ಕ ಮಾಡಿದ್ದೇವೆ. ರಾಜ್ಯದಲ್ಲಿ ಈ ರೀತಿ ಎಲ್ಲೆಲ್ಲಿ ಮುಖ್ಯವಾಗಿ Fluoride ನೀರಿದೆ ಮತ್ತು ಕುಡಿಯಲಿಕ್ಕೆ ಯೋಗ್ಯವಲ್ಲದ ಪ್ರದೇಶಗಳಿವೆ, ನೀರಿನ ಮೂಲಗಳಿವೆ ಅಂತಹ ಕಡೆ ನಮಗೆ ನದಿ ಮೂಲದಿಂದ ಅಥವಾ ಕೆರೆ ಮೂಲದಿಂದ ನೀರನ್ನು ಕೊಡಬೇಕೆಂದು ಜಲಸಂಪನ್ಮೂಲ ಇಲಾಖೆಗೆ ವಿನಂತಿ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಕಳ್ಳಂಬೆಳ್ಳ ಕೆರೆಗೆ ನೀರನ್ನು ತುಂಬಿಸುವ ರೀತಿಯಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತೆವೆ ಎನ್ನುವ ಮಾತನ್ನು ಶಾಸಕರಿಗೆ ಹೇಳಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಆ ಬಗ್ಗೆ ಪ್ರಾಧಿಕಾರ ರಚನೆ ಮಾಡುವಿರಾ?

ಶ್ರೀಮತಿ ಶೋಭಾ ಕರಂದ್ಲಾಜೆ: ಪ್ರಾಧಿಕಾರ ರಚನೆ ಮಾಡುವ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆ

28 (141) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆಯು ಜಿಲ್ಲಾ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುತ್ತದೆ ಹಾಗೂ ಈ ರಸ್ತೆಗಳು ಯಾವುವು;